

# ಪರಿಸರ ಸಂರಕ್ಷಣೆಗೆ ಬುದ್ಧ ಮಾರ್ಗದ ಬೆಳಕು



**ಬುದ್ಧನ ಹುಟ್ಟು, ಜ್ಞಾನೋದಯ, ನಡೆದ ಮಾರ್ಗ – ಪ್ರತಿಯೊಂದರಲ್ಲೂ ಪರಿಸರದೊಂದಿಗಿನ ಸಹನಡಿಗೆಯ ಕಾಣ್ಕೆಯನ್ನು ಕಾಣಬಹುದು. ಬೌದ್ಧ ಧರ್ಮದ ತಾತ್ವಿಕತೆ ಹಾಗೂ ಪರಿಸರ ಸಂರಕ್ಷಣೆಯ ಮಾರ್ಗ ಭಿನ್ನವೇನೂ ಅಲ್ಲ. ಮನುಷ್ಯಪ್ರೇಮ ಮತ್ತು ಪರಿಸರಪ್ರೇಮಗಳನ್ನು ಒಟ್ಟಿಗೆ ಬೆಸೆದುದು ಬುದ್ಧ ಮತ್ತು ಬೌದ್ಧ ಧರ್ಮದ ಹೆಗ್ಗಳಿಕೆ.**

**■ ಯು.ಎಂ. ಚಂದ್ರಶೇಖರ**

ಖಗೋಳಶಾಸ್ತ್ರಜ್ಞರ ಪ್ರಕಾರ ಈ ಬ್ರಹ್ಮಾಂಡದಲ್ಲಿ ಸುಮಾರು ಒಂದು ಬಿಲಿಯನ್ ಟ್ರಿಲಿಯನ್ (ಒಂದರ ನಂತರ ಇಪ್ಪತ್ತನಾಲ್ಕು ಸೊನ್ನೆಗಳನ್ನು ಇಟ್ಟರೆ ಲಭ್ಯವಾಗುವ ಸಂಖ್ಯೆ) ನಕ್ಷತ್ರಗಳೂ ಸುಮಾರು ಇಪ್ಪತ್ತು ಬಿಲಿಯನ್ ಟ್ರಿಲಿಯನ್ (ಎರಡರ ನಂತರ ಇಪ್ಪತ್ತೈದು ಸೊನ್ನೆಗಳನ್ನು ಇಟ್ಟರೆ ಲಭ್ಯವಾಗುವ ಸಂಖ್ಯೆ) ಗ್ರಹಗಳೂ ಇವೆಯಂತೆ. ಸೂರ್ಯ ಹಾಗೂ ಅದರ ಸುತ್ತ ಸುತ್ತುತ್ತಿರುವ ಒಂಬತ್ತು ಗ್ರಹಗಳೂ ಇವುಗಳಲ್ಲಿ ಸೇರಿವೆ. ಬ್ರಹ್ಮಾಂಡದಲ್ಲಿ ಇಷ್ಟೆಲ್ಲಾ ಗ್ರಹಗಳಿದ್ದರೂ, ನಮ್ಮ ಭೂಮಿಯಲ್ಲಿ ಮಾತ್ರ ಜೀವಿಗಳಿರುವುದು ಸೋಜಿಗದ ಸಂಗತಿ. ಒಂದು ಅಂದಾಜಿನಂತೆ, ಸುಮಾರು ಐನೂರು ಲಕ್ಷ ಪ್ರಭೇದಗಳ ಜೀವಿಗಳಿವೆ. ಅರಣ್ಯಗಳೂ ನದಿಗಳೂ ಸಾಗರಗಳೂ ಇತ್ಯಾದಿ ವಿವಿಧ ಆವಾಸವ್ಯವಸ್ಥೆಗಳೂ, ವಿವಿಧ ರೀತಿಯ ಹವಾಮಾನಗಳೂ, ಮಣ್ಣು ಎಲ್ಲವೂ ಒಟ್ಟಾಗಿ ಸೇರಿ ಭೂಗ್ರಹದಲ್ಲಿ ವಿಪುಲವಾದ ಜೀವಸಂಪತ್ತು ಇರುವಂತೆ ಮಾಡಿವೆ. ಮನುಷ್ಯನೂ ಈ ಜೀವರಾಶಿಯಲ್ಲಿ ಒಂದು ಭಾಗ. ಮನುಷ್ಯ ತನ್ನ ಆಹಾರ, ವಸ್ತ್ರ, ಮರಮುಟ್ಟುಗಳು, ಔಷಧಗಳು – ಹೀಗೆ ಅನೇಕ ಅಗತ್ಯಗಳಿಗೆ ಪ್ರಾಣಿಗಳು ಹಾಗೂ ಸಸ್ಯಗಳನ್ನು ಅವಲಂಬಿಸಿದ್ದಾನೆ. ಈ ಅವಲಂಬನೆಯ ಪರಿಸರದ ಮೇಲಿನ ಒತ್ತಡಕ್ಕೆ ಕಾರಣವಾಗುತ್ತದೆ. ಆ ಕಾರಣದಿಂದಲೇ ಹಲವು ದಾರ್ಶನಿಕರು ಮತ್ತು ಧರ್ಮಗಳು ಜೀವಸಂಪತ್ತಿನ ಸುಸ್ಥಿರ ಬಳಕೆ ಹಾಗೂ ಸಂರಕ್ಷಣೆಯ ಅವಶ್ಯಕತೆಯನ್ನು ಒತ್ತಿ ಒತ್ತಿ ಹೇಳಿದ್ದಾರೆ. ಹೀಗೆ ಪರಿಸರ ಸಂರಕ್ಷಣೆಯ ಮಹತ್ವವನ್ನು ಎತ್ತಿಹಿಡಿದ ಚೇತನಗಳಲ್ಲಿ ಭಗವಾನ್ ಗೌತಮ ಬುದ್ಧ ಹಾಗೂ ಅವರು ಪ್ರತಿಪಾದಿಸಿದ ಬೌದ್ಧಧರ್ಮವನ್ನು ಗುರ್ತಿಸಬಹುದು.

ಗೌತಮರ ಜೀವನವು ಪ್ರಕೃತಿಯೊಡನೆ ಹೆಣೆದುಕೊಂಡೇ ಸಾಗಿದೆ. ಕಪಿಲವಸ್ತುವಿನ ಮಹಾರಾಣಿ ಮಹಾಮಾಯ ಗರ್ಭವತಿಯಾಗಿದ್ದಾಗ, ತನ್ನ ತವರಿಗೆ ಹೋಗುವ ಸಂದರ್ಭದಲ್ಲಿ ಲುಂಬಿನಿಯ ಒಂದು ಉದ್ಯಾನವನದಲ್ಲಿ, ಅಶೋಕಮರದ ನೆರಳಿನಲ್ಲಿ ಸಿದ್ಧಾರ್ಥನಿಗೆ ಜನ್ಮ ನೀಡಿದರೆಂದು ಹೇಳಲಾಗುತ್ತದೆ. ಹೀಗೆ, ಪರಿಸರದ ನಡುವೆಯೇ ಹುಟ್ಟಿದ ಸಿದ್ಧಾರ್ಥ, ದುಃಖದ ಮೂಲ ಹುಡುಕುತ್ತಾ ಹೋಗಿ ಉತ್ತರ ಕಂಡುಕೊಂಡಿದ್ದು ಪರಿಸರದ ನಡುವೆಯೇ. ಗಯಾದಲ್ಲಿರುವ ಜಿಂಕೆಗಳ ಉದ್ಯಾನದಲ್ಲಿ ಒಂದು ಅಶ್ವತ್ಥಮರದ (ಅರಳಿಮರ) ಕೆಳಗೆ, 49 ದಿನಗಳ ಕಾಲ ಕಠಿಣವಾದ ತಪಸ್ಸನ್ನು ಮಾಡಿದ ನಂತರ ಸಿದ್ಧಾರ್ಥನಿಗೆ ಜ್ಞಾನೋದಯವಾಯಿತು. ಮುಂದೆ ಭಗವಾನ್ ಬುದ್ಧರು, ಮನುಕುಲವು ಸನ್ಮಾರ್ಗದಲ್ಲಿ ನಡೆಯಲು ಹಾಗೂ ಪ್ರಕೃತಿಸಂರಕ್ಷಣೆಗೆ ಸಂಬಂಧಿಸಿದ ಅನೇಕ ಉಪದೇಶಗಳನ್ನು ನೀಡುತ್ತಾ ಬಂದರು. ಜೈವಸಂಪತ್ತಿನ ಸಂರಕ್ಷಣೆ, ಅವುಗಳ ಸುಸ್ಥಿರ ಬಳಕೆ ಮತ್ತು ಸಮತೋಲನ ಅಭಿವೃದ್ಧಿ ಕುರಿತು ಬೌದ್ಧಧರ್ಮದ ಗ್ರಂಥಗಳಲ್ಲಿ ಉಲ್ಲೇಖಗಳಿವೆ.

ದೈನಂದಿಕ ಪ್ರಾರ್ಥನೆ ಹಾಗೂ ಧ್ಯಾನದ ಸಂದರ್ಭದಲ್ಲಿ ಬೌದ್ಧಧರ್ಮದ ಅನುಯಾಯಿಗಳು, 'ಪಾನತಿಪತ ವೀರಮನಿ ಸಿಕ್ಕಾಪದಮ್ ಸಮಾಧಿಯಾಮಿ' ('ಜೀವಿಗಳ ನಾಶಕ್ಕೆ ಕಾರಣವಾಗುವ ಯಾವ ಕ್ರಿಯೆಯನ್ನೂ ಮಾಡದಂತಹ ಗುಣವನ್ನು ಬೆಳೆಸಿಕೊಳ್ಳುತ್ತೇನೆ')